ತುಮಕೂರು ತಾಲ್ಲೂಕಿನ ಗ್ರಾಮಗಳಿಗೆ ಹೇಮಾವತಿ ಯೋಜನೆಯಿಂದ ನೀರು

1813 - ಶ್ರೀ. ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಬೃಹತ್ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) *ಹೇಮಾವತಿ ತುಮಕೂರು ಶಾಖಾ ನಾಲೆಯಿಂದ ತುಮಕೂರು ತಾ : ನಾಗವಲ್ಲಿ, ಹೆಬ್ಬೂರು ಮತ್ತು ಗೂಳೂರು ಕೆರೆಗಳಿಗೆ ಏತ ನೀರಾವರಿ ಯೋಜನೆ ಮೂಲಕ ನೀರು ಕೊಡುವ ಯೋಜನೆಯು ಸರ್ಕಾರದ ಮುಂದಿದೆಯೇ ?*

ಆ) *ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ?*

ಶ್ರೀ. ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ) *ಹೌದು.*

ಆ) *ಪರಿಶೀಲನಾ ಹಂತದಲ್ಲಿದೆ.*

ಕೊಜೆಂಟ್ರಿಕ್ಸ್ ಯೋಜನೆಯ ಪ್ರಗತಿ

1814 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಕೊಜೆಂಟ್ರಿಕ್ಸ್ ಯೋಜನೆಯು ಯಾವ ಹಂತದಲ್ಲಿದೆ.*

ಆ) *ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು ?*

ಶ್ರೀ. ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಮಂಗಳೂರು ಸಮೀಪ ನಂದಿಕೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಕೊಜೆಂಟ್ರಿಕ್ಸ್ ವಿದ್ಯುತ್ ಉತ್ಪಾದನಾ ಯೋಜನೆಯ ವಂಗಳೂರು ಪವರ್ ಕಂಪನಿ ಸಂಸ್ಥೆಯು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯೊಡನೆ ಪರಿಷ್ಕೃತ ವಿದ್ಯುತ್ ಖರೀದಿ ಒಪ್ಪಂದಕ್ಕೆ 17ನೇ ನವೆಂಬರ್ 1997 ರಂದು ಸಹಿ ಹಾಕಿದೆ. ಈ ಪರಿಷ್ಕೃತ ವಿದ್ಯುತ್ ಖರೀದಿ ಒಪ್ಪಂದವನ್ನು ಅಂತಿಮ ಅನುಮೋದನೆಗಾಗಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. ಪ್ರಸ್ತುತ ಈ ಯೋಜನೆಯು ಭಾರತಸರ್ಕಾರದಿಂದ ಕೌಂಟರ್ ಗ್ಯಾರಂಟಿಯನ್ನು ನಿರೀಕ್ಷಿಸುತ್ತಿದೆ.

ಆ) ಕೇಂದ್ರ ವಿದ್ಯುತ್ ಪ್ರಾಧಿಕಾರವು ದಿನಾಂಕ 10-7-96 ರಂದು ನೀಡಿದ ಟೆಕ್ನೋ ಎಕಾನಾಮಿಕ್ ಕ್ಲಿಯರೆನ್ಸ್ (ಟಿ.ಇ.ಸಿ) ಪ್ರಕಾರ ಮೊದಲನೇ ಘಟಕವು ಫೈನಾನ್ಸಿಯಲ್ ಕ್ಲೋಷರನ್ನು ಹೊಂದಿದ ದಿನಾಂಕದಿಂದ33 ತಿಂಗಳ ಅವಧಿಯಲ್ಲಿ ಕಾರ್ಯಾರಂಭವನ್ನು ಮಾಡುವ ಕಾರ್ಯಕ್ರಮವನ್ನು ಹೊಂದಲಾಗಿದೆ. ಬಾಕಿ ಉಳಿದ ಮೂರು ಘಟಕಗಳನ್ನು ಮೂರು ತಿಂಗಳ ಅಂತರದಲ್ಲಿ ಮೊದಲ ಘಟಕ ಕಾರ್ಯಾರಂಭ ಮಾಡಿದ ದಿನಾಂಕದಿಂದ ಒಂದರ ನಂತರ ಒಂದನ್ನು ಚಾಲನೆಗೊಳಿಸುವ ಕಾರ್ಯಕ್ರಮವಿದೆ.